ಶ್ರೀ ವೈ. ಕೆ. ರಾವಂಯ್ಯ.—ನಾನು ಕೇಳುತ್ತಿರುವ ಪ್ರಶ್ನೆ, ಈ ಕಿಲಸಗಾರರು ಮುಷ್ಕರ ಹೊಡುತ್ತಿರುವುದರಿಂದ ರೈತರನ್ನು ಉಳಿಸಲಿಕ್ಕೆ ಏನು ಮಾಡುತ್ತೀರಿ ? ಇವರು ಮುಷ್ಕರ ಮಾಡುತ್ತಿದ್ದರೆ ಹುಳುಗಳು ಸಾಯುತ್ತಿವೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಅವರ ಸೇವೆಯನ್ನು ಖಾಯಂ ಮಾಡುವುದಕ್ಕೆ ಕಾನೂನು ಅಡ್ಡಿ ಇದೆ, ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಈ ಮಧ್ಯದಲ್ಲಿ ರೈತರು ಹಾಳಾಗುವುದು ಬೇಡ.

(ಆ ವೇಳೆಗೆ ಪ್ರೇಕ್ಷಕರ ಗ್ಯಾಲರಿಯಿಂದ ಒಬ್ಬ ಯುವಕ ''ಅಕಾಲಿದಳ, ಬಿಜೆಪಿಗೆ ಧಿಕ್ಕಾರ. ಬೋಲೋ ಭಾರತ ಮಾತಾಕೀ ಜೈ'' ಎಂದು ಕೂಗಿದ್ದು ಕೇಳಿ ಬಂತು.)

MR. SPEAKER.—Send him out.

## (iii) ಸೂರಜ್ ಡೈಮಂಡ್ ಇಂಡಸ್ಟ್ರೀಸ್, ಇಂದಿರಾನಗರ, ಇದರ ಬೀಗ ಮುಂದ್ರೆಯ ಬಗ್ಗೆ

ಶ್ರೀ ಮೈಪೇಲ್ ಬಿ. ಫರ್ನಾಂಡೀಸ್,—ಮಾನ್ಯ ಅಧ್ಯಕ್ಷರೇ, ನಾನು ಹೇಳುವ ವಿಷಯ ಡೈಮಂಡ್‌ಗೆ ಸಂಬಂಧಪಟ್ಟದ್ದು, ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ. ಇದನ್ನು ಉತ್ಪ್ರೇಕ್ಷೆಗಾಗಿ ಹೇಳುತ್ತಿಲ್ಲ. ಜೇಮ್ಸ್‌ಬಾಂಡ್ ಬಂದು ಕ್ರಮ ತೆಗೆದುಕೊಳ್ಳಬೇಕಾದ ಆವಶ್ಯಕತೆ ಬಂದಿದೆ. ಬೆಂಗಳೂರು ನಗರದ ಇಂದಿರಾನಗರ ಬಡಾವಣೆಯಲ್ಲಿ ನೂರು ಅಡಿ ಅಗಲದ ರಸ್ತೆ ಇದೆ, ಅಲ್ಲಿ ಮೂರು ಅಂತಸ್ತಿನ ಒಂದು ಕಟ್ಟಡ ಇದೆ.

ಅದು ಜುಲೈ ೮೨ರಲ್ಲಿ ಅಸ್ತಿತ್ವಕ್ಕೆ ಬಂದು, ಒಂದುಮೂರು ಅಂತಸ್ತಿನ ಕಟ್ಟಡ ಆಗಿದ್ದು ಇದರ ಬೇಸ್ ಮೆಂಟಿನಲ್ಲಿ ಮೆಷಿನರೀಸ್ ಇದೆ, ನೆಲ ಮಹಡಿಯಲ್ಲಿ ಆಡಳಿತ ವರ್ಗ ಇತ್ತು. ೧೯೮೨ನೇ ಇಸವಿಯಲ್ಲಿ ಬೆಲ್ಜಿಯಂನಲ್ಲಿನ ಒಬ್ಬ ಟೆಕ್ನಿಷಿಯನ್‌ನನ್ನು ಕರೆಸಿಕೊಂಡು ಸುಮಾರು ೬೦ ಜನರಿಗೆ ಟ್ರೈನಿಂಗನ್ನು ಡೈಮಂಡ್ ಕಟಿಂಗ್ ಬಗ್ಗೆ ಕೊಡಿಸಿದ್ದಾರೆ. ಇವರ ಹತ್ತಿರ ಒಟ್ಟು ೫೮ ಮೆಷಿನ್‌ಗಳಿವೆ. ಮೆಹತಾ ಎನ್ನುವವರು ಇದಕ್ಕೆ ಡೈರೆಕ್ಟರ್, ಇವರು ಬೊಂಬಾಯಿಯಲ್ಲಿ ವಾಸ ಮಾಡುತ್ತಿದ್ದಾರೆ. ಇವರ ಜೊತೆಗೆ ಇಬ್ಬರು ಫಾರಿನರ್ಸ್ ಇದ್ದಾರೆ. ಟೂರಿಸ್ಟ್ ವೀಸಾದಲ್ಲಿ, ಇಂಡಿಯಾದಲ್ಲಿ ವಾಸ ಮಾಡಿಕೊಂಡಿದ್ದಾರೆ. ಒಂದು ಚಿಕ್ಕ ಬೋರ್ಡ್‌ನ್ನು ಈ ಬಿಲ್ಡಿಂಗ್ ಮೇಲೆ ತೂಗಿಹಾಕಿದ್ದಾರೆ. ಜೊತೆಗೆ ಒಂದು ದೊಡ್ಡ ಬೋರ್ಡು ಸಹ ಇದೆ. ಆದರೆ ದೊಡ್ಡ ಬೋರ್ಡನ್ನು ಹೆಚ್ಚಿಗೆ ಹಾಕುವುದಿಲ್ಲ. ಯಾರಾದರೂ ಫಾರಿನರ್ಸ್ ಬಂದಾಗ, ಅವರಿಗೆ ತೋರಿಸುವುದಕೋಸ್ಕರ ಫೋಟೋ ತೆಗೆಸಿಕೊಳ್ಳುವುದಕ್ಕೋಸ್ಕರ ಈ ದೊಡ್ಡ ಬೋರ್ಡ್‌ನ್ನು ಹಾಕುತ್ತಾರೆ. ಇವರು ಅಲ್ಲಿ ಡೈಮೆಂಡ್ಸ್‌ನ್ನು ಕಂಟಿಗ್ ಮಾಡುತ್ತಾರೆ. ಅಲ್ಲಿ ಕೆಲಸ ಮಾಡುವ ೬೦ ಜನ ಕಾರ್ಮಿಕರೂ ಗುಟ್ಟಾಗಿ ಆಡಳಿತ ವರ್ಗದವರಿಗೆ ತಿಳಿಯದಂತೆ ನಮ್ಮ ಕಾರ್ಮಿಕ ಸಂಘಕ್ಕೆ ಸದಸ್ಯರಾದರು. ನಂತರ ತಮ್ಮ ವೇತನವನ್ನು ಹೆಚ್ಚಿಸಲು ಆಡಳಿತ ವರ್ಗವನ್ನು ಕೇಳಿದಾಗ ನೀವು ಈ ರೀತಿ ಮಾಡುವುದಾದರೆ ನಿಮಗೆ ಪೀಸ್‌ವರ್ಕ್ ಮೇಲೆ ಕೆಲಸ ಕೊಡಬೇಕಾಗುತ್ತದೆಂದು ಹೇಳಿ ಅವರಲ್ಲಿ ಒಬ್ಬ ಕಾರ್ಮಿಕನನ್ನು ಡಿಸ್‌ಮಿಸ್ ಮಾಡಿದರು. ಇದನ್ನು ಪ್ರತಿಭಟಿಸಿ ಕಾರ್ಮಿಕರು ಮುಷ್ಕರ ಹೂಡಿದರು. ಆ ಕಾರ್ಮಿಕರು ಬಂದು ವಿಷಯ ತಿಳಿಸಿದಾಗ, ನಾನು ಅಲ್ಲಿಗೆ ಹೋಗಿ ನೀವು ಕೆಲಸಕ್ಕೆ ಹೋಗಿ ಎಂದು ಹೇಳಿದೆ. ನನ್ನ ಸಲಹೆಯ ಮೇರೆಗೆ ಅವರು ಬೆಳಿಗ್ಗೆ ಕೆಲಸಕ್ಕೆ ಹೋದಾಗ ಆ ಕಾರ್ಖಾನೆ ಮಾಯವಾಗಿದೆ. ಆ ಜಾಗದಲ್ಲಿ ಬೋರ್ಡ್ ಇಲ್ಲ, ಮ್ಯಾನೇಜ್‌ಮೆಂಟ್ ಇಲ್ಲ, ಆದಕ್ಕೆ ಬೀಗ ಹಾಕಿದ್ದಾರೆ. ಮಿಷಿನರಿಗಳೆಲ್ಲಾ ಒಳಗಡೆ ಇದೆ. ಇಷ್ಟು ನಡೆಯುವುದಕ್ಕೂ ಮುಂಚಿತವಾಗಿ ಗೃಹ ಕೃತ್ಯಕ್ಕಾಗಿ ತೆಗೆದುಕೊಂಡಿದ್ದ ವಿದ್ಯುತ್ತಿನಿಂದ ಅವರು ಈ ಫ್ಯಾಕ್ಟರಿ ನಡೆಸುತ್ತಿದ್ದಾರೆಂಬುದನ್ನು ತಿಳಿದು ವಿದ್ಯುಚ್ಛಕ್ತಿ ಮಂಡಲಿಯವರು ಈ ಕಂಪನಿಯ ಮೇಲೆ ಧಾಳಿ ಮಾಡಿದರು. ಆದರ ಫಲಿತಾಂಶ ಏನೆಂದು ಗೊತ್ತಾಗಲಿಲ್ಲ. ಇವರು ಡೊಮೆಸ್ಟಿಕ್ ಪರ್ಪಸ್‌ಗೆ ಕರೆಂಟ್ ಉಪಯೋಗ ಮಾಡಿಕೊಳ್ಳುತ್ತಿದ್ದರು. ಮತ್ತು ಕಂಪನಿ ರೂಲ್ಸ್ ಪ್ರಕಾರ ಈ ಫ್ಯಾಕ್ಟರಿ ರಿಜಿಸ್ಟರ್ ಆಗಿಲ್ಲ. ಸೆಂಟ್ರಲ್ ಎಕ್ಸೈಸ್ ಆವರಿಗೆ ಕರ್ಮಷಿಯಲ್ ಟ್ಯಾಕ್ಸ್, ಆವರಿಗೆ, ಸೇಲ್ಸ್ ಟ್ಯಾಕ್ಸ್, ಆವರಿಗೆ ಹಾಗೂ ಕಸ್ಟಂಸ್ ಆವರಿಗೆ ಇವರ ವ್ಯವಹಾರ ಏನೂ ಗೊತ್ತಿಲ್ಲ. ಈ ಕಂಪನಿಯು ಕಳೆದ ಎರಡು ವರ್ಷಗಳಿಂದ ಡೈಮೆಂಡ್ಸ್ ಕಟಿಂಗ್ ಮಾಡಿ, ವ್ಯಾಪಾರ ಮಾಡಿಕೊಂಡು ಬರುತ್ತಿರುವುದು ಯಾರಿಗೂ ಗೊತ್ತಿಲ್ಲ. ಈಗ ಇಂತಹ ಮೋಸದ ಪ್ರಕರಣ ನಡೆದಿದೆ. ಈಗ ಫಾರಿನರ್ಸ್‌ರನ್ನು ಕೂಡಲೇ

ಆರೆಸ್ಟ್ ಮಾಡಿ, ಅಲ್ಲಿರತಕ್ಕಂಥ ಮೆಷಿನ್‌ಗಳನ್ನು ಕೂಡಲೇ ಸೀಸ್ ಮಾಡಬೇಕು. ಮತ್ತು ಅಲ್ಲಿ ವಿದ್ಯುಚ್ಛಕ್ತಿ ಇಲಾಖೆಗೆ ಲಾಸ್ ಆಫ್ ರೆವಿನ್ಯೂ ಆಗಿದೆ. ಗೃಹಬಳಕೆಗೆ ಎಂದು ತೆಗೆದುಕೊಂಡಿದ್ದ ವಿದ್ಯುತ್ತನ್ನು ಅನಾವಶ್ಯಕವಾಗಿ ಫ್ಯಾಕ್ಟರಿಗೆ ಉಪಯೋಗ ಮಾಡಿಕೊಂಡಿದ್ದಾರೆ. ಆ ಬಿಲ್ಡಿಂಗ್ ಮಾಲೀಕರು ಯಾರೆಂದರೆ ಮಾಜಿ ಮಂತ್ರಿ ಶ್ರೀ ಪಾಣಿಕ್‌ರಾವ್ ಪಾಟೀಲ್ ಎಂದು ತಿಳಿದು ಬಂದಿದೆ. ಅವರು ಈಗ ಈ ಮನೆಯ ಸದಸ್ಯರಾಗಿರಬಹುದು. ಕೆಇಬಿ ಅವರು ಆ ಕಟ್ಟಡಕ್ಕೆ ಹೆವಿ ವೈರಿಂಗ್ ಮತ್ತು ಹೆವಿ ಎಲೆಕ್ಟ್ರಿಕ್ ಪಾಡಿಸಲು ಮನೆಯ ಮಾಲೀಕರು ಅನುಮತಿ ಕೊಟ್ಟಿದ್ದಾರೆಯೇ ? ಇದರ ಬಗ್ಗೆ ಸಿಐಡಿ ಎನ್‌ಕ್ವೈರಿ ಆಗಬೇಕು, ಕೂಡಲೇ ಇದನ್ನು ಗಮನಕ್ಕೆ ತೆಗೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಬಹಳ ಮಹತ್ವರವಾದ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಸರ್ಕಾರ ಈ ವಿಷಯದ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಂದು ಈ ಮೂಲಕ ಮಾನ್ಯ ಸದಸ್ಯರಿಗೆ ಆಶ್ವಾಸನೆ ನೀಡುತ್ತೇನೆ.

(IV) ಜೆ. ಎಚ್.ಪೆಡಿಕಲ್ ಕಾಲೇಜು ಬೆಳಗಾಂನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ಕೊಡದಿರುವ ಬಗ್ಗೆ.—

ಶ್ರೀ ಎಸ್. ಮಲ್ಲಾರಗೌಡ ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೆ, ೧೯೮೬-೮೪ನೇ ಸಾಲಿಗೆ ಪೋಸ್ಟ್ ಗ್ರಾಜ್ಯುಯೇಟ್ಸ್ ವಿದ್ಯಾರ್ಥಿಗಳಿಗೆ ಸುಮಾರು ನಾಲ್ಕೈದು ತಿಂಗಳುಗಳಿಂದ ಸ್ಟೈಫಂಡ್ ಕೊಡುತ್ತಿಲ್ಲ. ಇಡೀ ರಾಜ್ಯದಿಂದ ಆಯ್ಕೆ ಮಾಡಿದಂಥ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ಸಿಗದೆ ಬಹಳ ತೊಂದರೆ ಯಾಗಿದೆ. ಇದರ ಬಗ್ಗೆ ಸರ್ಕಾರದ ವತಿಯಿಂದ ಏನು ವ್ಯವಸ್ಥೆ ಮಾಡಿದ್ದೀರಿ ? ಇದುವರೆಗೂ ಇದರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಆದುದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಒಂದು ವ್ಯವಸ್ಥೆಯನ್ನು ಮಾಡುತ್ತಾರೆಯೇ ? ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಂತ್ರಿಗಳು ಇಲ್ಲಿ ಇಲ್ಲ. ಈ ವಿಷಯವನ್ನು ನಾನು ಅವರ ಗಮನಕ್ಕೆ ಕಳುಹಿಸಿಕೊಡುತ್ತೇನೆ.

(V) ದಿನಾಂಕ ೨೬ನೇ ಫೆಬ್ರುವರಿ ೧೯೮೪ರಂದು ನಡೆದ ಲಾರಿ ಚಾಲಕರ ಮುಷ್ಕರದ ಬಗ್ಗೆ.—

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ಮೊನ್ನೆಯ ದಿವಸ ಕರ್ನಾಟಕ ಲಾರಿ ಓನರ್ಸ್ ಫೆಡರೇಷನ್ ಅವರು ೨೪ ಗಂಟೆಗಳ ಕಾಲ ಮುಷ್ಕರ ಮಾಡಿದರು. ಆ ಮುಷ್ಕರಕ್ಕೆ ಕಾರಣ, ಅವರು ಹಲವಾರು ತಿಂಗಳುಗಳ ಹಿಂದೆ ಒಂದು ಮನವಿ ಕೊಟ್ಟಿದ್ದರು. ಅವರ ಮನವಿ ಏನೆಂದರೆ ದಕ್ಷಿಣ ಭಾರತದಲ್ಲಿ ಎಲ್ಲಾ ರಾಜ್ಯಗಳಿಗಿಂತ ನಮ್ಮ ಕರ್ನಾಟಕದಲ್ಲೇ ಟ್ಯಾಕ್ಸ್ ಜಾಸ್ತಿ ಹಾಕಿದ್ದೀರಿ. ಬೇರೆ ಕಡೆ ೧,೪೦೦ ಹಾಗೂ ೧,೫೦೦ ರೂಪಾಯಿಗಳಿದ್ದರೆ ನಮ್ಮ ಕರ್ನಾಟಕದಲ್ಲ ೧,೮೨೦ ರೂಪಾಯಿಗಳಿದೆ. ಅದೂ ಅಲ್ಲದೆ, ಈ ವರ್ಷದಿಂದ ಶೇತ್ರು ಪರ್ಸೆಂಟ್ ಕೂಡಾ ಹಾಕಿದ್ದೀರಿ. ಇದರಿಂದ ಬಹಳ ತೊಂದರೆಯಾಗಿದೆ. ಅದೂ ಅಲ್ಲದೆ, ಪೋಲೀಸ್ ಇಲಾಖೆ ಮತ್ತು ಟ್ರಾನ್ಸ್‌ಪೋರ್ಟ್ ಇಲಾಖೆಗಳಿಂದ ನಮಗೆ ತೊಂದರೆಯಾಗುತ್ತಿದೆ ಎಂದು ಸಹ ಅವರು ತಿಳಿಸಿದ್ದಾರೆ. ಲಾರಿ ಓನರ್ಸ್ ಫೆಡರೇಷನ್ ಅವರು ಈಗ ಹಾಕಿರತಕ್ಕಂಥ ತೆರಿಗೆಯನ್ನು ಕಡಿಮೆ ಮಾಡಬೇಕೆಂದು ಕೇಳಿದ್ದಾರೆ. ಮುಷ್ಕರ ಮಾಡುವುದರ ಮೂಲಕ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ನಾನು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರ ನನಗೆ ಈಗ ಗೊತ್ತಾಯಿತು. ನಮ್ಮ ಕರ್ನಾಟಕ ರಾಜ್ಯದಲ್ಲಿ ೧,೮೦೦ ರೂಪಾಯಿಗಳ ತೆರಿಗೆ ಇವರ ಮೇಲೆ ಹಾಕಿದ್ದೇವೆ. ಬೇರೆ ರಾಜ್ಯಗಳಲ್ಲಿ ೧,೪೦೦ ರಿಂದ ೧,೫೦೦ ರೂಪಾಯಿಗಳವರೆಗೆ ಸರ್ಚಾರ್ಜ್ ಹಾಕಿರುವುದರ ಬಗ್ಗೆ ಕೂಡಾ ನಾವು ಇನ್ನು ಒಂದು ವಾರದ ಒಳಗಾಗಿ ದ್ವಿಪಕ್ಷೀಯ ಸಭೆಯನ್ನು ಕರೆದು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.